ಭಾರತ ಕ್ರಿಕೆಟ್ ತಂಡ ಕಳೆದ ಐದು ವರ್ಷಗಳ ಅವಧಿಯಲ್ಲಿ (2018ರಿಂದ 2022) ಟೆಸ್ಟ್, ಏಕದಿನ ಮತ್ತು ಟ್ವೆಂಟಿ–20 ಮಾದರಿಗಳಲ್ಲಿ ಆಡಿದ 164 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 149ರಲ್ಲಿ ಗೆಲುವು ಪಡೆದಿದೆ. ಈಗಿನ ತಲೆಮಾರಿನ ಯುವಜನತೆಯ ನೆಚ್ಚಿನ ಮಾದರಿ ಚುಟುಕು ಕ್ರಿಕೆಟ್‌ನಲ್ಲಿ ಆಡಿದ 74 ಪಂದ್ಯಗಳಲ್ಲಿ 68ರಲ್ಲಿ ಜಯಭೇರಿ ಮೊಳಗಿಸಿದೆ. ಈ ಸಾಧನೆ ದೇಶದ ಕ್ರಿಕೆಟ್ ಪ್ರೇಮಿಗಳನ್ನು ಮೆಚ್ಚಿಸಿದೆ. ಆದರೆ, ಈ ಅವಧಿಯಲ್ಲಿ ಆಟಗಾರರು ಅನುಭವಿಸಿದ ಗಾಯದ ನೋವು, ಅಸ್ಥಿರ ಪ್ರದರ್ಶನ, ಫಿಟ್‌ನೆಸ್ ಕೊರತೆ, ತಂಡದಲ್ಲಿ ಬಂದು ಹೋದ 'ಅತಿಥಿ' ಆಟಗಾರರು, 'ಐಪಿಎಲ್' ಎಂಬ ಬೆರಗಿನ ಲೋಕದಲ್ಲಿ ದಿಢೀರನೆ ಕಾಣಿಸಿಕೊಂಡು ಅಷ್ಟೇ ವೇಗವಾಗಿ ಹೊರಗುಳಿದವರ ಸಂಖ್ಯೆಯೂ ದೊಡ್ಡದಿದೆ.

ಭಾರತ ಕ್ರಿಕೆಟ್ ವ್ಯವಸ್ಥೆ, ತಂಡಗಳ ಸಾಧನೆಯ ಹಿಂದೆ ತಳಮಟ್ಟದ ಶ್ರಮ, ನಿರಂತರವಾಗಿ ನಡೆದುಕೊಂಡು ಬರುತ್ತಿದ್ದ ಟೂರ್ನಿಗಳು, ದೇಶಿ ಟೂರ್ನಿಗಳಲ್ಲಿ ಸಿಗುತ್ತಿದ್ದ ತರಬೇತಿ, ಕ್ಲಬ್ ಹಾಗೂ ಶಾಲಾ ಮಟ್ಟದ ಕ್ರಿಕೆಟ್ ಟೂರ್ನಿಗಳು ಪ್ರಮುಖವಾಗಿ ಕಾರಣವಾಗಿವೆ.

ಭಾರತದ ದೇಶಿ ಟೂರ್ನಿಗಳಲ್ಲಿ ಅಗ್ರಗಣ್ಯವಾಗಿರುವ ರಣಜಿಯಲ್ಲಿ ನೀಡಿದ ಪ್ರದರ್ಶನವೇ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಳಿಸಲು ರಹದಾರಿಯಾಗಿತ್ತು. ಆದರೆ, 'ಐಪಿಎಲ್' ಆರಂಭವಾದ ಬಳಿಕ ಈ ವ್ಯಾಖ್ಯಾನ ಬದಲಾಗಿದೆ. ರಣಜಿಯಲ್ಲಿ ಆಡದಿದ್ದರೂ, ದೇಶವನ್ನು ಪ್ರತಿನಿಧಿಸದಿದ್ದರೂ, ಐಪಿಎಲ್‌ನಲ್ಲಿ ಸ್ಥಾನ ಸಿಗುತ್ತದೆ ಎನ್ನುವುದು ಈಗಾಗಲೇ ಸಾಬೀತಾಗಿದೆ. ಚುಟುಕು ಕ್ರಿಕೆಟ್‌ನಿಂದ ಹಣ, ಸ್ಥಾನಮಾನ ಲಭಿಸಿ ಆಟಗಾರರು ಸಿರಿವಂತರಾಗಿದ್ದಾರೆ. ಆದಾಯದ ಬೆನ್ನು ಹತ್ತಿರುವ 'ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ' (ಬಿಸಿಸಿಐ) ತಾಳಕ್ಕೆ ಆಟಗಾರರು ಕುಣಿಯುತ್ತಿದ್ದಾರೆ, ಆಟಗಾರರ ಅಪೇಕ್ಷೆಗೆ ತಕ್ಕಂತೆ ಕ್ರಿಕೆಟ್ ಮಂಡಳಿ ಕುಣಿಯುತ್ತಿದೆ. ಈ ಅತಿರಂಜಿತ ಲೋಕದ 'ಬೌಂಡರಿ' ಹಾಗೂ 'ಸಿಕ್ಸರ್'ಗಳ ಹಾವಳಿಯಲ್ಲಿ ರಣಜಿ ಸೊರಗುತ್ತಿದೆ.

ದೊಡ್ಡ ಮಟ್ಟದಲ್ಲಿ ಆದಾಯ ತಂದುಕೊಡುವ ಟೂರ್ನಿಗಳನ್ನು ಆದ್ಯತೆ ಮೇರೆಗೆ ಆಯೋಜಿಸಿ, ತಾನು ಹಣ ಖರ್ಚು ಮಾಡಬೇಕಾದ ರಣಜಿಯಂಥ ಪ್ರತಿಷ್ಠಿತ ಟೂರ್ನಿಗಳನ್ನು ನಡೆಸಲು ಬಿಸಿಸಿಐಗೆ 'ಸಮಯವೇ ಇಲ್ಲ' ಎನ್ನುವ ನೆಪ ಮುಖ್ಯವಾಗಿದೆ. ಈ ಕಾರಣದಿಂದಲೇ, ಒಂದು ವರ್ಷದ ಹಿಂದೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರವಿಶಾಸ್ತ್ರಿ – 'ರಣಜಿ ಟ್ರೋಫಿ ಟೂರ್ನಿ ನಿರ್ಲಕ್ಷಿಸಿದರೆ ಭಾರತದ ಕ್ರಿಕೆಟ್‌ನ ಬೆನ್ನುಹುರಿಯೇ ಇಲ್ಲದಂತಾಗುತ್ತದೆ. ದೇಶದಲ್ಲಿ ಕ್ರಿಕೆಟ್ ಕ್ಷೀಣಿಸಲಿದೆ' ಎಂದು ಆತಂಕ ವ್ಯಕ್ತಪಡಿಸಿದ್ದರು. ಅವರ ಮಾತು ಅಕ್ಷರಶಃ ನಿಜ.

88 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ, ಭಾರತದ ಕ್ರಿಕೆಟ್‌ಗೆ ಭದ್ರಬುನಾದಿ ಹಾಕಿಕೊಟ್ಟು ಜಗತ್ತಿನ ನಂಬರ್ ಒನ್ ತಂಡವನ್ನಾಗಿ ಮಾಡಿದ ರಣಜಿ ಟ್ರೋಫಿಗೆ ಮೊದಲಿನಷ್ಟು ಆದ್ಯತೆ ಸಿಗುತ್ತಿಲ್ಲ. ತಾನೇ ಹುಟ್ಟುಹಾಕಿದ ರಣಜಿ ಕ್ರಿಕೆಟ್ ಪರಿಕಲ್ಪನೆಯನ್ನು ಬಿಸಿಸಿಐ ನಿರ್ಲಕ್ಷ್ಯ ಮಾಡುತ್ತಿದೆ ಎನ್ನುವುದೀಗ ಗುಟ್ಟಾಗಿ ಉಳಿದಿಲ್ಲ. ಅನೇಕ ಮಾಜಿ ಕ್ರಿಕೆಟಿಗರು ಈ ಕುರಿತು ಧ್ವನಿ ಎತ್ತಿದ್ದಾರೆ.

14 ವರ್ಷಗಳ ಹಿಂದೆಯಷ್ಟೇ ಬಿಸಿಸಿಐ ಆರಂಭಿಸಿದ 'ಚಿನ್ನದ ಮೊಟ್ಟೆ' ಇಡುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ನಡೆಸಲು ಪ್ರತಿ ವರ್ಷವೂ ಸಮಯ ಸಿಗುತ್ತಿದೆ. ದೇಶಿ ಪ್ರತಿಭೆಗಳನ್ನು ತಯಾರು ಮಾಡುವ ಕಾರ್ಖಾನೆ ಎನಿಸಿರುವ ರಣಜಿ ನಡೆಸಲು ಮಾತ್ರ ಸಮಯವೇ ಇಲ್ಲ. ಹೀಗಾಗಿ ಪದೇ ಪದೇ ಮುಂದೂಡಿ, ಟೀಕೆ ವ್ಯಕ್ತವಾದ ಬಳಿಕ ಈಗ ಟೂರ್ನಿಯನ್ನು ನಡೆಸಲಾಗುತ್ತಿದೆ.

ಜಗತ್ತಿನ ಅತ್ಯಂತ ಶ್ರೀಮಂತ ಕ್ರಿಕೆಟ್ ಮಂಡಳಿ ಬಿಸಿಸಿಐಗೆ ಮಹತ್ವದ ದೇಶಿ ಟೂರ್ನಿಗೆ ಯೋಜನೆ ರೂಪಿಸುವ ದೂರದೃಷ್ಟಿ ಹಾಗೂ ಸಮಯ ಇಲ್ಲ ಎನ್ನುವುದೇ ಹಾಸ್ಯಾಸ್ಪದ. ಕೋವಿಡ್ ಕಾರಣಕ್ಕಾಗಿ ಒಂದು ವರ್ಷ ರಣಜಿ ಆಡಿಸಲಿಲ್ಲ. ಅದೇ ಸಮಯದಲ್ಲಿ 'ಬಯೊಬಬಲ್' ಎನ್ನುವ ಸುರಕ್ಷಾ ಕವಚದಲ್ಲಿ ಅಂತರರಾಷ್ಟ್ರೀಯ ಹಾಗೂ ಐಪಿಎಲ್ ಪಂದ್ಯಗಳನ್ನು ನಡೆಸಲಾಗಿತ್ತು. ಕೆಲವು ಆಟಗಾರರಿಗೆ ಸೋಂಕು ತಗುಲಿತ್ತು. ಆದರೆ, ಟೂರ್ನಿ ಮಾತ್ರ ನಿಲ್ಲಿಸಲಿಲ್ಲ.

## ರಣಜಿ ಸಾಗಿಬಂದ ಹಾದಿ

1934–35 ಮೊದಲ ರಣಜಿ ಋತುವಿನಲ್ಲಿ ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ಹೀಗೆ ನಾಲ್ಕು ವಲಯಗಳಿಂದ ಒಟ್ಟು 15 ತಂಡಗಳು ಪಾಲ್ಗೊಂಡಿದ್ದವು. ಟೂರ್ನಿ ಆರಂಭವಾದಾಗಿನಿಂದ ಮುಂಬೈ ತಂಡ ಪ್ರಾಬಲ್ಯ ಸಾಧಿಸಿತ್ತು. 1958–59ರ ಋತುವಿನಿಂದ 1972–73ರ ಅವಧಿಯಲ್ಲಿಂತೂ ಸತತ 15 ವರ್ಷಗಳ ಕಾಲ 'ರಣಜಿ ರಾಜ'ನಾಗಿ ಮುಂಬೈ ಮೆರೆದಾಡಿತು. ಇದುವರೆಗೆ 41 ಸಲ ಚಾಂಪಿಯನ್ ಪಟ್ಟ ಹಾಗೂ ಆರು ಬಾರಿ ರನ್ನರ್ಸ್ ಅಪ್ ಸ್ಥಾನ ಗಳಿಸಿದೆ. ಹೀಗಾಗಿ ಮಹಾನಗರಿ ಮುಂಬೈ ದೇಶದ ಕ್ರಿಕೆಟ್‌ನ ಶಕ್ತಿಕೇಂದ್ರವಾಗಿ ರೂಪುಗೊಂಡಿತು. ಇದೇ ಕೇಂದ್ರದಿಂದ ಸಾವಿರಾರು ಜನ ಆಟಗಾರರು ದೇಶವನ್ನು ಪ್ರತಿನಿಧಿಸಿದರು. ಭಾರತದ ಕ್ರಿಕೆಟ್ ತಂಡವೆಂದರೆ ಮುಂಬೈ ತಂಡ ಎಂದೇ ಜನಜನಿತವಾಗಿತ್ತು.

ಸೀಮಿತ ಪ್ರದೇಶದಲ್ಲಿ ಮಾತ್ರ ಕ್ರಿಕೆಟ್ ಪ್ರತಿಭೆಗಳು ಹೊರಬರುವ ಅಪಾಯ ಮತ್ತು ಭವಿಷ್ಯದಲ್ಲಿ ಈ ಕ್ರೀಡೆಯ ಬೆಳವಣಿಗೆಗೆ ಆಗುವ ಅಡೆತಡೆಗಳನ್ನು ಸೂಕ್ಷ್ಮವಾಗಿ ಅರಿತ ಬಿಸಿಸಿಐ ರಣಜಿಯಲ್ಲಿ ಹೊಸ ಪ್ರಯೋಗಗಳನ್ನು ಮಾಡಿತು.

ಭೌಗೋಳಿಕವಾಗಿ ವಲಯಗಳನ್ನು ವಿಂಗಡಿಸಿ ನಡೆಸಲಾಗುತ್ತಿದ್ದ ಮಾದರಿಗೆ ವಿದಾಯ ಹೇಳಿ ಪ್ಲೇಟ್, ಎಲೈಟ್, ಸೂಪರ್ ಲೀಗ್ ಮಾದರಿಗಳನ್ನು ನಡೆಸಿ, ಬಳಿಕ ತಟಸ್ಥ ಸ್ಥಳಗಳಲ್ಲಿಯೂ ಪಂದ್ಯಗಳನ್ನು ಆಯೋಜಿಸಿತು. ಅಂತರರಾಷ್ಟ್ರೀಯ ಪಂದ್ಯಗಳ ವೇಳೆ ಬಳಸುವ ತಂತ್ರಜ್ಞಾನಗಳನ್ನು ದೇಶಿ ಟೂರ್ನಿಯಲ್ಲಿ ಪ್ರಯೋಗಿಸಿತು. ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಗಳಿಸಲು ರಣಜಿಯಲ್ಲಿನ ಪ್ರದರ್ಶನವೇ ಮೆಟ್ಟಿಲು ಎನ್ನುವುದು ಆಟಗಾರರಿಗೆ



### ಇಪಿಎಲ್ ಆದಾಯ ಮೀರಿಸಿದ ಐಪಿಎಲ್

'ಇಂಗ್ಲಿಷ್ ಪ್ರೀಮಿಯರ್ ಲೀಗ್' (ಇಪಿಎಲ್) ಎಂಬುದು ಇಂಗ್ಲೆಂಡ್‌ನ ಫುಟ್‌ಬಾಲ್ ಕ್ಲಬ್‌ಗಳ ವೃತ್ತಿಪರ ಟೂರ್ನಿ. ಹೆಚ್ಚು ಜನ ನೋಡುವ ಟೂರ್ನಿ ಇದಾಗಿದೆ. ಇದು ಅಲ್ಲಿನ ಪ್ರತಿಷ್ಠಿತ ಫುಟ್‌ಬಾಲ್ ಟೂರ್ನಿಯೂ ಹೌದು. 20 ಕ್ಲಬ್‌ಗಳು ಲೀಗ್‌ನಲ್ಲಿ ಆಡುತ್ತವೆ. 1992ರಲ್ಲಿ ಆರಂಭವಾದ ಈ ಸಂಸ್ಥೆ ಇಷ್ಟು ವರ್ಷಗಳ ಕಾಲ ಗಳಿಸುತ್ತಿದ್ದ ಆದಾಯವನ್ನೂ 2008ರಲ್ಲಿ ಆರಂಭವಾದ ಐಪಿಎಲ್ ಮೀರಿಸಿದೆ.

ಹಿಂದೆ ಸೌರವ್ ಗಂಗೂಲಿ ಬಿಸಿಸಿಐ ಅಧ್ಯಕ್ಷರಾಗಿದ್ದಾಗ, '15ನೇ ಆವೃತ್ತಿ ಅಂತ್ಯದ ಬಳಿಕ ಇಪಿಎಲ್‌ಗಿಂತಲೂ ಐಪಿಎಲ್ ಹೆಚ್ಚು ಆದಾಯ ಗಳಿಸಿದೆ' ಎಂದು ಹೇಳಿದ್ದಾರೆ. ವಿವಿಧ ಮೂಲಗಳಿಂದ 1,000 ಕೋಟಿ ಸಂಪಾದಿಸಿದೆ. ಬಿಸಿಸಿಐ 'ಮಹಿಳಾ ಇಂಡಿಯನ್ ಪ್ರೀಮಿಯರ್ ಲೀಗ್' (ಡಬ್ಲ್ಯುಐಪಿಎಲ್) ಟಿ–20 ಕ್ರಿಕೆಟ್ ಟೂರ್ನಿ ಆರಂಭಿಸಲು ಮುಂದಾಗಿದ್ದು, ಮುಂದಿನ ಐದು ವರ್ಷಗಳ ಪ್ರಸಾರ ಹಕ್ಕನ್ನು ವಯಾಕಾಮ್ 18 ಸಂಸ್ಥೆ 951 ಕೋಟಿಗೆ ತನ್ನದಾಗಿಸಿಕೊಂಡಿದೆ. ಭಾರತದಲ್ಲಿ ಮಹಿಳಾ ಟೂರ್ನಿಗೆ ಸಿಕ್ಕ ದೊಡ್ಡ ಮೊತ್ತದ ಹಣ ಇದಾಗಿದೆ.